ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080–22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆ.ನ.ವಿ./ಶೈ.ವಿ./ ಸ್ನಾತಕ ಪ್ರವೇಶಾತಿ / 2022-23

ದಿನಾಂಕ: 16.06.2022

## ಸುತ್ತೋಲೆ

ವಿಷಯ: 2022–23ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕ ಪದವಿಗಳ (UG) ಕೋರ್ಸುಗಳಿಗೆ ಪ್ರವೇಶಾತಿಗಾಗಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 34 ಇಜಿ ಓವಿ 2020 (ಭಾಗ–2) ದಿನಾಂಕ. 10.06.2022

***

2022–23ನೇ ಸಾಲಿನ ಶೈಕ್ಷಣಿಕ ಪ್ರಥಮ ವರ್ಷದ (UG) ಕೋರ್ಸುಗಳಿಗೆ (UUCMS )ನಲ್ಲಿ ಆನ್‌ಲೈನ್ ವೆಬ್‌ಸೈಟ್ ಮುಖಾಂತರವಾಗಿ (https://uucms.karnataka.gov.in) ಲಾಗಿನ್ ಆಗಿ ಆನ್‌ಲೈನ್‌ನಲ್ಲಿಯೆ ಕಾಲೇಜುಗಳು ಪ್ರವೇಶಾತಿಯನ್ನು ನೀಡಬೇಕೆಂದು ಉಲ್ಲೇಖ (1)ರ ಸರ್ಕಾರದ ಆದೇಶದಂತೆ ಕ್ರಮವಹಿಸಬೇಕೆಂದು ಸೂಚಿಸಲಾಗಿದೆ.

ಪ್ರಾಂಶುಪಾಲರುಗಳು ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮಹಿಸುವುದು.

1. ತಮ್ಮ ಕಾಲೇಜುಗಳಲ್ಲಿ help deskನ್ನು ಸ್ಥಾಪಿಸಬೇಕು. ಪ್ರವೇಶಾತಿಗಳಿಗೆ ಬರುವ ವಿದ್ಯಾರ್ಥಿಗಳಿಗೆ ಎನ್‌ಇಪಿ ಅನುಸಾರ ಪ್ರವೇಶಾತಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಸಹಕರಿಸಲು ಕ್ರಮವಹಿಸುವುದು.
2. UUCMS ನಲ್ಲಿ ತಮ್ಮ ಕಾಲೇಜಿನಲ್ಲಿ ಆನ್‌ಲೈನ್ ಅಪ್ಲಿಕೇಶನ್ ಅಪ್‌ಲೋಡ್ ಮಾಡಲು ಸಹಕರಿಸಲು ಅನುಕೂಲವಾಗುವಂತೆ ನೋಡಲ್ ಅಧಿಕಾರಿಗಳನ್ನು ನೇಮಿಸುವುದು ಮತ್ತು ಇವರ ಮೊಬೈಲ್ ಸಂಖ್ಯೆ ವಿದ್ಯಾರ್ಥಿಗಳಿಗೆ / ಪೋಷಕರಿಗೆ ನೋಡುವುದು ಮತ್ತು ಆನ್‌ಲೈನ್ ಪೋರ್ಟ್‌ಲ್‌ಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ನೀಡವಂತೆ ಕ್ರಮವಹಿಸುವುದು.

ಪ್ರವೇಶಾತಿಗಾಗಿ ಕೊನೆಯ ದಿನಾಂಕ ತರಗತಿಗಳ ಪ್ರಾರಂಭ ಮತ್ತು ಇನ್ನಿತರ ವಿಷಯಗಳನ್ನು ತಮ್ಮ ಕಾಲೇಜುಗಳಲ್ಲಿ ಸರ್ಕಾರದಿಂದ ಮತ್ತು ವಿಶ್ವವಿದ್ಯಾನಿಲಯದಿಂದ ನೀಡುವ ನಿರ್ದೇಶನದ ಪ್ರಕಾರವಾಗಿ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಕುಲಸಚಿವರು

ಗೆ,

ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು, ಬೆಂ.ನ.ವಿ. ಬೆಂಗಳೂರು

ಪ್ರತಿಗಳು:

1. ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌ)/ವಿತ್ತಾಧಿಕಾರಿಗಳ ಆಪ್ತ ಸಹಾಯಕರು. ಬೆಂ.ನ.ವಿ., ಬೆಂಗಳೂರು
2. ಕಚೇರಿ ಪ್ರತಿ/ರಕ್ಕಾ ಕಡತ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಸಂಯೋಜನೆ, ಹೊಸ ಕೋರ್ಸು ಪ್ರಾರಂಭ, ಸಂಯೋಜನೆ ಮುಂದುವರಿಕೆ, ಖಾಯಂ ಸಂಯೋಜನೆ ಇತ್ಯಾದಿಗಳ ಆನ್ ಲೈನ್ ಮುಖಾಂತರ ಸಲ್ಲಿಸುವ ಸಂಬಂಧ ವೇಳಾಪಟ್ಟಿ ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶದ ಸಂಖ್ಯೆ: ಇಡಿ 34 ಇಜಿಓವಿ ಭಾಗ 2, ಬೆಂಗಳೂರು, ದಿನಾಂಕ: 26.4.2022.

*******

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ: 26.4.2022 ರ ಆದೇಶದಲ್ಲಿ 2022-23ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಮುಖಾಂತರವೇ ಆನ್ ಲೈನ್ ಸಂಯೋಜನಾ ತಂತ್ರಾಂಶದ ಅರ್ಜಿಯನ್ನು ರಾಷ್ಟ್ರೀಯ ಶಿಕ್ಷಣ ನೀತಿ-2020 ರಂತೆ ಆಹ್ವಾನಿಸಲು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾಲಯಗಳಡಿ ಬರುವ ಸಂಯೋಜಿತ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಗಳಾದ OPENING NEW COLLEGES, EXTENSION OF EXISTING AFFILIATION, CONTINUATION OF AFFILIATION, PERMANENT AFFILIATION, CHANGE OR ADDITION OF SUBJECT, DIVISION OF FACULTY, INCREASE OF INTAKE, CHANGE OF NAME, CLOSURE AND WITHDRAWAL OF A COLLEGE, LOCAL INQUIRY COMMITTEE FORMATION AND TRANSFER OF MANAGEMENT ಸಂಬಂಧಿಸಿದ ವಿವರಗಳನ್ನು ಆನ್‌ಲೈನ್ ಅರ್ಜಿಗಳಲ್ಲಿ ಭರ್ತಿ ಮಾಡಿ ವಿಶ್ವವಿದ್ಯಾಲಯಗಳು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ ಸಮಿತಿಯ ಶಿಫಾರಸ್ಸನ್ನು ಆನ್ ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ನಂತರ ವಿಶ್ವವಿದ್ಯಾಲಯವು ತನ್ನ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಂಯೋಜನಾ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿದೆ.

2022-23ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯಗಳು ಮತ್ತು ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶಾತಿಯನ್ನು ಇಲಾಖೆಯ ಯುಯುಸಿಎಂಎಸ್ (UUCMS) ತಂತ್ರಾಂಶದಲ್ಲಿ ಆನ್‌ಲೈನ್ ಮುಖಾಂತರವೇ ಈ ಕೆಳಕಂಡ ಕ್ರಮಾನುಗತಿಯಲ್ಲಿ ನಡೆಸಲಾಗುತ್ತದೆ.

1. Online Affiliation ತಂತ್ರಾಂಶದಲ್ಲಿ ಅನುಮೋದನೆಯಾಗಿರುವ, ವಿಶ್ವವಿದ್ಯಾಲಯವಾರು, ಕಾಲೇಜುವಾರು ಪದವಿ, ವಿಷಯ ಮತ್ತು ಇನ್‌ಟೇಕ್ ದತ್ತಾಂಶವನ್ನು UUCMS ಪ್ರವೇಶಾತಿ ನಮೂನೆಗೆ ಲಿಂಕ್ ಮಾಡಲಾಗಿದೆ.
2. ಸದರಿ ದತ್ತಾಂಶವನ್ನು ವಿಶ್ವವಿದ್ಯಾಲಯದ ಸಂಬಂದಿಸಿದ ಅಧಿಕಾರಿಯು ಅನುಮೋದಿಸುವುದರ ಜೊತೆಗೆ, ಪ್ರವೇಶಾತಿ ಸಮಯದಲ್ಲಿ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಂದ ಪಡೆಯುವ ವಿಶ್ವವಿದ್ಯಾಲಯ ಶುಲ್ಕ, ಕ್ಯಾಲೆಂಡರ್ ಆಫ್ ಈವೆಂಟ್ಸ್ ಗಳನ್ನು ಸೆಟ್ ಮಾಡಲಾಗುತ್ತದೆ.
3. Affiliationನಲ್ಲಿ ಅನುಮೋದನೆಗೊಂಡಿರುವ ಹೊಸ ಕಾಲೇಜು ಮತ್ತು ಹೊಸ ಕೋರ್ಸ್‌ಗಳನ್ನು ವಿಶ್ವವಿದ್ಯಾಲಯದ ಸಂಬಂದಿಸಿದ ಅಧಿಕಾರಿಯು UUCMS ಪೋರ್ಟಲ್‌ನಲ್ಲಿ ಸೇರ್ಪಡೆಗೊಳಿಸಿ, ಪರಿಶೀಲಿಸಿ ಅನುಮೋದಿಸಲಾಗುತ್ತದೆ.
4. ತದನಂತರ ಸದರಿ ವಿಶ್ವವಿದ್ಯಾಲಯಗಳ ಸಂಯೋಜಿತ ಕಾಲೇಜುಗಳಲ್ಲಿ ವಿಶ್ವವಿದ್ಯಾಲಯ ಅನುಮೋದಿಸಿರುವ ಕಾಲೇಜುವಾರು ಪದವಿಗಳು, ವಿಷಯ ಮತ್ತು ಇನ್‌ಟೇಕ್ ದತ್ತಾಂಶವನ್ನು ಪರಿಶೀಲಿಸುತ್ತಾರೆ, ವ್ಯತ್ಯಾಸ ಕಂಡುಬಂದಲ್ಲಿ ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳಬಹುದು.
5. ಕಾಲೇಜುಗಳು ತಮ್ಮ ಹಂತದಲ್ಲಿ ಪದವಿಗಳು, ವಿಷಯಗಳು, ಕೆಟೆಗರಿ ಇತ್ಯಾದಿಗಳಿಗನುಗುಣವಾಗಿ ವಿದ್ಯಾರ್ಥಿಗಳಿಂದ ಪಡೆಯುವ ಶುಲ್ಕಗಳನ್ನು ಪೋರ್ಟಲ್‌ನಲ್ಲಿ ಸೆಟ್ ಮಾಡುತ್ತಾರೆ ಹಾಗೂ ತಮ್ಮ ತಮ್ಮ ಕಾಲೇಜುಗಳಲ್ಲಿನ ಪ್ರವೇಶಾತಿ ಮಾದರಿ, ಕ್ಯಾಲೆಂಡರ್ ಆಫ್ ಈವೆಂಟ್ಸ್ ಗಳನ್ನು ಸೆಟ್ ಮಾಡಿಕೊಳ್ಳಬಹುದು.



Scanned with CamScanner

6. ಕಾಲೇಜುಗಳ ಹಂತದಲ್ಲಿ ವಿದ್ಯಾರ್ಥಿಗಳು ಪಾವತಿಸುವ ಆನ್‌ಲೈನ್ ಶುಲ್ಕವನ್ನು ನಿಗದಿತ ಕಾಲೇಜುಗಳ ನಿಗದಿತ ಬ್ಯಾಂಕ್‌ಗಳಲ್ಲಿ ಪಾವತಿಸಲು ಭಾರತ ಸರ್ಕಾರದ NSDL ರವರ PayGovನೊಂದಿಗೆ ನೊಂದಾಯಿಸಲು ಸೂಕ್ತ ಕ್ರಮವಹಿಸುವುದು.
7. ತದನಂತರ ವಿದ್ಯಾರ್ಥಿಗಳು ಪೋರ್ಟಲ್‌ನಲ್ಲಿ ಸೂಕ್ತ ಕಾಲೇಜಿನಲ್ಲಿ ಪದವಿ ಮತ್ತು ವಿಷಯಗಳನ್ನು ಆಯ್ಕೆ ಮಾಡಿಕೊಂಡು UUCMS ಮುಖಾಂತರ ಪ್ರವೇಶಾತಿ ಶುಲ್ಕವನ್ನು ಪಾವತಿಸಿ ಪ್ರವೇಶಾತಿಯನ್ನು ಪಡೆಯುತ್ತಾರೆ.

ಸಂಬಂಧ ಪ್ರಸಕ್ತ ಸಾಲಿನಲ್ಲಿ ಮೇಲೆ ಸೂಚಿಸಿದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಪ್ರವೇಶಾತಿ ಮಾದರಿ UUCMS ಸಿದ್ಧಪಡಿಸಲಾಗಿದೆ. 2022-23 ನೇ ಸಾಲಿನ ದ್ವಿತೀಯ ಪಿ.ಯು.ಸಿ. ಫಲಿತಾಂಶವು ಜೂನ್‌ನ 3ನೇ ವಾರ ಹೊರಬೀಳುವ ಸೂಚನೆಯಿರುವ ಹಿನ್ನೆಲೆಯಲ್ಲಿ, ಆನ್‌ಲೈನ್ ಪ್ರವೇಶಾತಿಯ ಪ್ರಕ್ರಿಯೆಯನ್ನು ಕೈಗೊಳ್ಳಲು ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020 (ಭಾಗ-2),**

**ಬೆಂಗಳೂರು, ದಿನಾಂಕ: 10.06.2022**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, 2022-23 ನೇ ಸಾಲಿನ ದ್ವಿತೀಯ ಪಿ.ಯು.ಸಿ ಫಲಿತಾಂಶವು ಮೂರನೇ ವಾರದಲ್ಲಿ ಪ್ರಕಟಗೊಳ್ಳುವ ಹಿನ್ನೆಲೆಯಲ್ಲಿ, ಪ್ರಸಕ್ತ ಸಾಲಿನಿಂದ ಆನ್‌ಲೈನ್ ಸಂಯೋಜನೆ ಮತ್ತು ಪ್ರವೇಶಾತಿ ಪ್ರಕ್ರಿಯೆಯನ್ನು ಸರ್ಕಾರ ಸಿದ್ಧಪಡಿಸಿರುವ NIC/UUCMS ತಂತ್ರಾಂಶದ ಮುಖಾಂತರ ಕ್ರಮಕೈಗೊಳ್ಳುವ ಸಲುವಾಗಿ ಈ ಕೆಳಕಂಡ ದಿನಾಂಕಗಳನ್ನು ಪಾಲಿಸುವಂತೆ ಆದೇಶಿಸಿದೆ.

| Sl. No | Particular | Date |
|---|---|---|
| 1 | Training to Registrar Admin and Nodal Officers on admission | 9th June 2022 |
| 2 | Training (Virtual)to Principals of affiliated colleges | 10th & 11th June 2022 |
| 3 | Affiliation approval at Universities (Syndicate Approval) | 15th June 2022 |
| 4 | Affiliation approval at Government | 20th June 2022 |
| 5 | UUCMS for universities level setup | 10th June 2022 |
| 6 | UUCMS for college level setup | 13th June 2022 |
| 7 | PayGov account setup by Colleges | By 17th June 2022 |
| 8 | Portal Available for student | 18th June 2022 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

( ಶೀತಲ್ ಎಂ. ಹಿರೇಮಠ )
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾಲಯಗಳು-1).

ಪ್ರತಿಯನ್ನು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.



Scanned with CamScanner